ಬಾಹ್ಯ ಸಾಲದ ಮೇಲಣ ಬಡ್ಡಿಯು ರಾಜ್ಯ ಯೋಜನೆಯಲ್ಲಿ ಒಳಗೊಂಡಿರುತ್ತದೆ.

ರಾಜ್ಯ ಯೋಧರಿಗೆ ನೀಡುತ್ತಿರುವ ಸೌಲಭ್ಯಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 897(1141)

ಸದಸ್ಯರ ಹೆಸರು: ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ)

ಪ್ರಶ್ನೆ

1) ದೇಶದ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ರಾಜ್ಯದ ಯೋಧರ ಸಂಖ್ಯೆ ಎಷ್ಟು?

2) ಕಳೆದ 3 ವರ್ಷಗಳಲ್ಲಿ ರಾಜ್ಯದ ಎಷ್ಟು ಜನ ಯೋಧರು ಸೇವೆಯಲ್ಲಿದ್ದಾಗ ಮೃತ ಪಟ್ಟಿದ್ದಾರೆ, ಎಷ್ಟು ಜನ ಅಂಗವಿಕಲರಾಗಿದ್ದಾರೆ? (ವಿವರ ನೀಡುವುದು)

3) ರಾಜ್ಯ ಸರ್ಕಾರ ಮೃತಪಟ್ಟ ಹಾಗೂ ಅಂಗವಿಕಲರಾದ ಯೋಧರಿಗೆ ನೀಡುತ್ತಿರುವ ಸೌಲಭ್ಯಗಳೇನು?

4) ಮೃತಪಟ್ಟ ಯೋಧರ ಕುಟುಂಬಗಳ ಅವಲಂಬಿತರಿಗೆ ಮತ್ತು ಅಂಗವಿಕಲರಾದವರಿಗೆ ಸರ್ಕಾರಿ ಉದ್ಯೋಗ ಕೊಡುವ ಬಗ್ಗೆ ಸರ್ಕಾರದ ನಿಲುವೇನು?

ಉತ್ತರಿಸುವ ಸಚಿವರು: ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಉತ್ತರ

1) ಸದರಿ ಅಂಕಿ ಸಂಖ್ಯೆಗಳು ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

2) ಯುದ್ಧ ಮತ್ತು ಯುದ್ಧದಂತಹ ಕಾರ್ಯಾಚರಣೆಯಲ್ಲಿ 1-1-1999ರಿಂದ 7-10-2001ರವರೆಗೆ ರಾಜ್ಯದ 57 ಜನ ಯೋಧರು ಮೃತರಾಗಿದ್ದಾರೆ. ಇದೇ ಅವಧಿಯಲ್ಲಿ 30 ಜನ ಯೋಧರು ಅಂಗವಿಕಲರಾಗಿದ್ದಾರೆ.

3) ಯುದ್ಧದಲ್ಲಿ ಮಡಿದ ಯೋಧರ ಅವಲಂಬಿತರಿಗೆ ನೀಡುವ ಸೌಲಭ್ಯಗಳು:

1) ರೂ.2 ಲಕ್ಷಗಳ ಪರಿಹಾರಧನ

2) 2 ಎಕರೆ ನೀರಾವರಿ ಜಮೀನು ಅಥವಾ
4 ಎಕರೆ ತೋಟದ ಜಮೀನು ಅಥವಾ
8 ಎಕರೆ ಒಣ ಜಮೀನನ್ನು ಉಚಿತವಾಗಿ ನೀಡಲಾಗುತ್ತಿದೆ. ಅಥವಾ ಇದರ

ಬದಲಿಗೆ ರೂ.25,000 ನಗದು ಅನುದಾನ ನೀಡಲಾಗುತ್ತಿದೆ.

3) ಉಚಿತ ಮನೆ.

ಗಾಯಗೊಂಡವರಿಗೆ ರೂ.50,000 ಪರಿಹಾರ ಧನ.

4) ಸರ್ಕಾರದ ಪರಿಶೀಲನೆಯಲ್ಲಿದೆ.

ನಂಜನಗೂಡಿನ ಜೆಮಿನಿ ಡಿಸ್ಟಲರಿ ಮುಚ್ಚಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 988(1265)

ಸದಸ್ಯರ ಹೆಸರು: ಶ್ರೀ ಪಾಪಣ್ಣ.ವಿ.(ಹುಣಸೂರು)

ಪ್ರಶ್ನೆಗಳು

ಅ) ನಂಜನಗೂಡಿನ ಜೆಮಿನಿ ಡಿಸ್ಟಿಲರಿಯನ್ನು ಬಂದ್ ಮಾಡಲಾಗಿರುವುದು ನಿಜವೇ?

ಆ) ಬಂದ್ ಮಾಡಲಾಗಿದ್ದರೆ ಎಂದಿನಿಂದ ಮುಚ್ಚಲಾಗಿದೆ?

ಇ) ಯಾವ ನಿರ್ದೇಶನದ ಮೇರೆಗೆ ಬಂದ್ ಮಾಡಲಾಗಿದೆ?

ಈ) ಈ ನಿಟ್ಟಿನಲ್ಲಿ ಅಬಕಾರಿ ಇಲಾಖೆಯಿಂದ ಪೊಲಾಸಿಸ್ ಸರಬರಾಜನ್ನು ನಿಲ್ಲಿಸಲು ಆದೇಶಿಸಲಾಗಿದೆಯೇ?

ಇದಕ್ಕೆ ಕಾರಣವೇನು?

ಶ್ರೀ ಎಂ.ಎಲ್.ಗಣಪಯ್ಯ (ಅಬಕಾರಿ ರಾಜ್ಯ ಸಚಿವರು)

ಉತ್ತರ

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಇಲ್ಲ